**ಮಾಹಿತಿಪೂರ್ಣ**




'ಪ್ಲಾಸ್ಟಿಕ್ ಪಳಗಿಸಿ', ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ, ಜುಲೈ 5) ಮಾಹಿತಿಪೂರ್ಣ. ಇಂದು ನಾವು ಊಟ ಇಲ್ಲದೇ ಬದುಕಬಹುದು; ಆದರೆ ಪ್ಲಾಸ್ಟಿಕ್ ಇಲ್ಲದೇ ಜೀವನ ನಡೆಸು ವುದು ಕಷ್ಟ ಎಂಬ ಮಟ್ಟಕ್ಕೆ ಬಂದಿದ್ದೇವೆ. ಸರ್ಕಾರ ಸಂಶೋಧನೆಗೆ ಹೆಚ್ಚು ಒತ್ತು ನೀಡಿ ಕರಗುವ ಗುಣ ಇರುವ ಪ್ಲಾಸ್ಟಿಕ್ ತಂದು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗಿದೆ.

—ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಮಹಾವೀರ ಕಾಸರ, ಸೋಮಣ್ಣ ಡಿ.ಎಸ್.ಬೆಂಗಳೂರು, ರಾಜೀವ್ ಎನ್. ಮಾಗಲ್ ಸಕಲೇಶಪುರ, ಅಂಚೆ ಸುಬ್ರಹ್ಮಣ್ಯ ಕೊಪ್ಪ

**ಪರಿಸರಕ್ಕೆ ಹಾನಿ**

'ಪ್ಲಾಸ್ಟಿಕ್ ಮತ್ತು ಪರಿಸರ' (ಸುಮಂಗಲಾ ಎಸ್. ಮುಮ್ಮಿಗಟ್ಟಿ) ಅವರ ಲೇಖನ ಸವಿಸ್ತಾರವಾಗಿದೆ. ಪ್ಲಾಸ್ಟಿಕ್‌ನಿಂದ ಮನುಷ್ಯರಿಗೆ ಮಾತ್ರವಲ್ಲ ಪಶು ಪಕ್ಷಿಗಳ ಜೀವಕ್ಕೂ ಅಪಾಯವಿದೆ. ಪ್ಲಾಸ್ಟಿಕ್ ಕರಗುವುದಿಲ್ಲ ಎಂಬುದು ಆತಂಕದ ವಿಚಾರ.

—ತೂರಗಲ್ಲ ಜಯಲಕ್ಷ್ಮಿ ರಾಮದುರ್ಗ

**ಮೊಬೈಲ್ ಗೀಳು**

'ನಿಮ್ಮೊಡನೆ'ಯಲ್ಲಿ 'ಮೊಬೈಲ್ ಗೀಳು ನಿಯಂತ್ರಿಸಿ' (ಬಿ.ಎಂ. ಹನೀಫ್) ಬರಹ ಚೆನ್ನಾಗಿದೆ. ಇಂದಿನ ಯುವಜನಾಂಗ ಊಟ ಬಿಟ್ಟರೂ ಮೊಬೈಲ್ ನೊಳಗೆ ಲೀನವಾಗುವುದನ್ನು ತಪ್ಪಿಸಿಕೊಳ್ಳುತ್ತಿಲ್ಲ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**500 ಟನ್ ಹಿಡಿಸುವುದೇ?**

'ಮಾವಿನ ಹಣ್ಣಿಗೆ ಮರುಜನ್ಮ' (ಸಿ.ಎಸ್.ನಿರ್ವಾಣ ಸಿದ್ದಯ್ಯ) ಲೇಖನ ಉಪಯುಕ್ತ. ಆದರೆ ಅಷ್ಟು ಸಣ್ಣ ಯಂತ್ರದಲ್ಲಿ 500 ಟನ್ ಮಾವಿನಹಣ್ಣು ಹಿಡಿಸ ಬಹುದೇ ಎಂಬುದು ಒಬ್ಬ ವ್ಯಾಪಾರಿಯಾಗಿ ನನ್ನ ಅನುಮಾನ.

—ವಿ. ಮಾಧವ ಶಾನುಭಾಗ ಕುಂದಾಪುರ

**ಕಲಾವಿದನ ಭಾವಚಿತ್ರ ಇರಬೇಕಿತ್ತು**

'ಕೊಳೆಯಲ್ಲೂ ಕಲೆ' (ಸುಭಾಸ ಯಾದವಾಡ) ಲೇಖನ ಅದ್ಭುತ ಹಾಗೂ ಅಚ್ಚರಿ ಮೂಡಿಸಿತು. ಬರೀ ಬೆರಳಲ್ಲಿ ಮನಮೋಹಕ ಚಿತ್ರ ಬಿಡಿಸುವ ಕಲಾವಿದ ನಿಕಿತನ ಭಾವಚಿತ್ರ ಇದ್ದರೆ ಚೆನ್ನಾಗಿತ್ತು.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ

**ಕನ್ನಡಿ ಹಿಡಿದಂತಿದೆ**

'ವಿಚಾರ ಲಹರಿ'ಯಲ್ಲಿ 'ಸಾಕ್ರೆಟೀಸ್‌ನನ್ನು ನೆನೆದು' (ಶಿಕಾಕು) ಬರಹ ಭಾರತದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ತಳಮಳ ಕ್ಕೆ ಕನ್ನಡಿ ಹಿಡಿದಂತಿದೆ. ಜತೆಗೆ ರಾಜಕಾರಣಿಗಳನ್ನು ಎಚ್ಚರಿಸಿದೆ. ಇದು ಪ್ರಜಾಪ್ರಭುತ್ವದ ಅಣಕ ಹಾಗೂ ಇದಕ್ಕೆ ಉತ್ತರ ಯಾರಿಗೂ ತಿಳಿಯಲಿಕ್ಕಿಲ್ಲ.

—ಡಾ.ಕೆ.ಕೆ.ಜಯಚಂದ್ರಗುಪ್ತ ಹಾಸನ, ರಾಜಶೇಖರ ಹಾದಿಮನಿ ಧಾರವಾಡ, ಶ್ರೀನಾಥ ಕೊನೇಟಿ ಬೆಂಗಳೂರು

**ಬರೀ ನೆಪವಷ್ಟೆ**

'ಸಾಕ್ರೆಟೀಸ್‌ನನ್ನು ನೆನೆಯುವ ನೆಪದಲ್ಲಿ ಬುದ್ಧ, ಪೈಗಂಬರ, ಬಸವಣ್ಣ ಇವರ ಮಾತುಗಳನ್ನೆಲ್ಲ ಸಾರಾಸಗಟಾಗಿ ಕೇವಲ ಉಪದೇಶವೆಂದಿದ್ದಾರೆ. ಇಷ್ಟಕ್ಕೂ ಇವರು ಕೂಡ ಸಾಕ್ರೆಟೀಸ್‌ನ ನೆಪ ಮಾಡಿಕೊಂಡು ಮಾಡಿರುವುದು ಅದೇ ತಾನೇ?

—ಶಂಕರೇಗೌಡ ತುಂಬಕೆರೆ ಮಂಡ್ಯ

**ಪ್ರಶ್ನಾಂಕಣ—ಅರ್ಥಪೂರ್ಣ**

ಪದಬಂಧ ಪುಟದ 'ಪ್ರಶ್ನಾಂಕಣ'ದಲ್ಲಿ ಮೂಡಿಬಂದ 'ದೂರವಾಗುತ್ತಿದೆಯೇ ನಮ್ಮ ಚಂದ್ರ?' (ಎನ್.ವಾಸುದೇವ್) ಬರಹ ಬಹಳ ಅರ್ಥಪೂರ್ಣವಾಗಿದೆ.

—ಬಿ.ಎನ್. ಸೊಲ್ಲಾಪುರೆ ಕಮಲನಗರ

**ಆದರ್ಶ ಮೆರೆದ ಜಪಾನೀಯರು**

'ಫಿಫಾ ಅಂಗಳದಲ್ಲಿ ಜಪಾನ್ ಜಾದು' (ಗಿರೀಶ ದೊಡ್ಡಮನಿ) ಲೇಖನ ಓದಿ ಖುಷಿಯಾಯಿತು. ಜಪಾನಿನ ಫುಟ್ಬಾಲ್ ಆಟದ ಅಭಿಮಾನಿಗಳು ಗ್ಯಾಲರಿಯಲ್ಲಿ ಬಿದ್ದಿದ್ದ ಕಸವನ್ನು ಎತ್ತಿ ಸ್ವಚ್ಛಗೊಳಿಸಿ ಆದರ್ಶ ಮೆರೆದಿದ್ದಾರೆ.

—ನಾರಾಯಣಯಾಜಿ ಶಿರಾಲಿ, ಎಚ್.ಆನಂದಕುಮಾರ್ ಚಿತ್ರದುರ್ಗ

**ಖುಷಿ ತಂದಿತು**

'ತರವಲ್ಲ ತಗಿ ನಿನ್ನ ತಂಬೂರಿ ಸ್ವರ' (ಉಮಾ ಅನಂತ್) ಲೇಖನ ಸ್ತುತ್ಯರ್ಹ. ತತ್ವಪದಗಳ ಹರಿಕಾರ ಸಂತ ಶಿಶುನಾಳ ಶರೀಫರ ದ್ವಿಶತಮಾನೋತ್ಸವ ನಿಮಿತ್ತ ಮೂಡಿಬಂದ ಬರಹ ಖುಷಿ ತಂದಿತು.

—ರವೀಂದ್ರನಾಥ ಶಿ. ಯಡಹಳ್ಳಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಪ.ಚಂದ್ರಕುಮಾರ್ ಗೌನಹಳ್ಳಿ

**ಮಕ್ಕಳ ಓದು**

'ಮಕ್ಕಳು, ಓದು, ಆಟ' (ಡಾ.ಕೆ.ಎಸ್. ಚೈತ್ರಾ) ಲೇಖನ ಸ್ವಾರಸ್ಯಕರವಾಗಿದೆ. ಮಕ್ಕಳಲ್ಲಿ ಎಳವೆ ಯಲ್ಲೇ ಓದುವ ಹವ್ಯಾಸ, ಅಭಿರುಚಿ ಬೆಳೆಸಬೇಕು. ಇಲ್ಲದಿದ್ದರೆ ಅವರ ಸೃಜನಶೀಲ ಸಾಮರ್ಥ್ಯ ಕುಗ್ಗುವ ಸಾಧ್ಯತೆ ಇದೆ.

—ವಿ. ಹೇಮಂತಕುಮಾರ, ಸುಂದರ್ ಬೆಂಗಳೂರು, ಮುಕುಂದ ಹೆರಕಲ್ಲ ಕಲಬುರಗಿ

**ಮನಮುಟ್ಟುವಂತಿದೆ**

ಕಥೆ 0 (ಡಾ.ಎಂ. ಸತ್ಯನಾರಾಯಣರಾವ್) ಮನಮುಟ್ಟುವಂತಿದೆ,

—ಕೆ.ವಿ.ರಾಜಲಕ್ಷ್ಮಿ ಬೆಂಗಳೂರು

**ಅತ್ಯುತ್ತಮ ಸಲಹೆ**

ಫ್ಯಾಷನ್ ಪುಟದ 'ಬಿಂದಿ ಆಯ್ಕೆ ಹೀಗಿರಲಿ' (ಪ.ನಾ.ಹಳ್ಳಿ ಹರೀಶ್‌ಕುಮಾರ್) ಲೇಖನದಲ್ಲಿ ಸಂಪ್ರದಾಯದ ಕೆಂಪು ಕುಂಕುಮ ಬದಲಾಗಿ ಅಲರ್ಜಿ ಇಲ್ಲದ ಬಿಂದಿ ಹಾಕಿಕೊಳ್ಳುವ ಬಗ್ಗೆ ಅತ್ಯುತ್ತಮ ಸಲಹೆ ನೀಡಿದ್ದಾರೆ.

—ನಳಿನಿ ಎಸ್. ನಾರಾಯಣ್ ಬೆಂಗಳೂರು

**ತಪ್ಪುಗಳು ನುಸುಳಿವೆ**

ದಶಕಗಳಿಂದ ನಾನು ತಪ್ಪದೇ ಓದುತ್ತಾ ಬಂದಿರುವ 'ಸುಧಾ' ವಾರಪತ್ರಿಕೆಯಲ್ಲಿ ಇತ್ತೀಚೆಗೆ ಹಲವಾರು ತಪ್ಪುಗಳು ನುಸುಳುತ್ತಿವೆ. 'ಜಾಣರ ಪೆಟ್ಟಿಗೆ' ಪುಟ ದಲ್ಲಿ ತುಂಬ ಕಾಗುಣಿತ ತಪ್ಪುಗಳಿವೆ. ಉದಾ: ರಘು ದಿಕ್ಷೀತ್ (ರಘು ದೀಕ್ಷಿತ್ ಎಂದಾಗಬೇಕು), ಸಂಭಂದಿಸಿದಂತೆ (ಸಂಬಂಧಿಸಿದಂತೆ), ಪುನಾರಾ ವರ್ತನೆ (ಪುನರಾವರ್ತನೆ), ಲಿಟಲ್ ಚಾಮ್ಸ್ (ಲಿಟಲ್ ಚಾಂಪ್ಸ್), ಸುಫಾರಿ (ಸುಪಾರಿ) ಇತ್ಯಾದಿ. ದಯವಿಟ್ಟು ಇಂತಹ ತಪ್ಪುಗಳಾಗದಂತೆ ನೋಡಿಕೊಳ್ಳಿ.

— ಸರಸ್ವತಿ ಶಂಕರ್ ಬೆಂಗಳೂರು


